ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್

# ಜಿಲ್ಲಾ ಆಯುಷ್ ಕಛೇರಿ

50 ಹಾಸಿಗೆಗಳ ಸಂಯುಕ್ತ ಆಯುಷ್ ಆಸ್ಪತ್ರೆ ಆವರಣ, ನಾಗಮ್ಮ ಕೇಶವಮೂರ್ತಿ ಬಡಾವಣೆ,
ಪೋದಾರ್ ಸ್ಕೂಲ್ ಹತ್ತಿರ (ಜೆ.ಹೆಚ್. ಪಟೇಲ್ ಬಡಾವಣೆ), ದಾವಣಗೆರೆ-577004.

E-mail: dao.davangere09@gmail.com ☎08192-221129

ಸಂ: ಜಿಆಕ/315/ಡಿಪಿಎಮ್/ಸಿಎಸ್‌ಎಸ್.ನೇ/2025-2026 ದಿನಾಂಕ: 05-01-2026

## ಪರಿಷ್ಕೃತ ನೇಮಕಾತಿ ಅಧಿಸೂಚನೆ

ದಾವಣಗೆರೆ ಜಿಲ್ಲಾ ಆಯುಷ್ ಕಛೇರಿ ವ್ಯಾಪ್ತಿಯಲ್ಲಿ ಬರುವ ಕೇಂದ್ರ ಪುರಸ್ಕೃತ ಯೋಜನೆಯ ರಾಷ್ಟ್ರೀಯ ಆಯುಷ್ ಅಭಿಯಾನದಡಿ ಮೇಲ್ದರ್ಜೆಗೇರಿಸಲಾದ ಈ ಕೆಳಕಂಡ ಆಸ್ಪತ್ರೆಗಳಲ್ಲಿ ತಾತ್ಕಾಲಿಕವಾಗಿ ಮಂಜೂರಾಗಿ ಖಾಲಿ ಇರುವ ಆಯುಷ್ ತಜ್ಞ ವೈದ್ಯರು ಹಾಗೂ ಮಲ್ಟಿಪರ್ಪಸ್ ವರ್ಕರ್ ಹುದ್ದೆಗಳನ್ನು ಮೆರಿಟ್ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2025, ಬೆಂಗಳೂರು, ದಿನಾಂಕ: 03-09-2025ರ ಪರಿಷ್ಕೃತ ಮೀಸಲಾತಿ ರೋಸ್ಟರ್‌ರನ್ವಯ ಸಂದರ್ಶನದ ಮೂಲಕ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆ ಖಾಲಿ ಇರುವ ಸ್ಥಳ | ಹುದ್ದೆಗಳ ಸಂಖ್ಯೆ | ಮೀಸಲಾತಿ/ ಸಮತಳ ಮೀಸಲಾತಿ | ಸಂಚಿತ ವೇತನ ಮಾಹೆ ಯಾನ | ಕನಿಷ್ಠ ವಿದ್ಯಾರ್ಹತೆ | ವಯೋಮಿತಿ |
|---|---|---|---|---|---|---|---|
| 1 | ತಜ್ಞ ವೈದ್ಯರು (ಯೋ ಮತ್ತು ಪ್ರ.ಚಿ) | ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆ, ದಾವಣಗೆರೆ. | 02 | ಪರಿಶಿಷ್ಟ ಜಾತಿ, ಪ್ರ-ಎ/ ಇತರೆ (Caste Code: 22, 28, 32, 40, 42, 48, 50, 51, 56, 61, 72, 76, 88, 89, 93, 94) | ರೂ. 52,550+ ರೂ. 5000 (ಪಿ.ಜಿ ಅಲೋಯನ್ಸ್)= ರೂ.57550/- | ಯೋಗ ಮತ್ತು ಪ್ರಕೃತಿ ಚಿಕಿತ್ಸೆಯಲ್ಲಿ ಎಂ.ಎಸ್./ ಎಂ.ಡಿ. ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು, ಸ್ನಾತಕೋತ್ತರ ಪದವೀಧರರು ಲಭ್ಯವಿಲ್ಲದಿದ್ದರೆ ಕನಿಷ್ಠ 3 ವರ್ಷಗಳ ಅನುಭವದೊಂದಿಗೆ ಪಿ.ಜಿ. ಅಲೋಯನ್ಸ್ ರಹಿತವಾಗಿ ಬಿಎನ್‌ವೈಎಸ್ ಪದವಿಯನ್ನು ಪರಿಗಣಿಸಲಾಗುವುದು. | ಕನಿಷ್ಟ-18 ಗರಿಷ್ಟ 40 ವರ್ಷ |
| | | | | ಸಾಮಾನ್ಯ ಅಭ್ಯರ್ಥಿ/ ಇತರೆ | | | ಕನಿಷ್ಟ-18 ಗರಿಷ್ಟ 35 ವರ್ಷ |
| 2 | ತಜ್ಞ ವೈದ್ಯರು (ಹೋಮಿಯೋಪತಿ) | ತಾಲ್ಲೂಕು ಸರ್ಕಾರಿ ಆಯುರ್ವೇದ ಆಸ್ಪತ್ರೆ, ಚನ್ನಗಿರಿ | 01 | ಪರಿಶಿಷ್ಟ ಪಂಗಡ/ ಇತರೆ | | ಹೋಮಿಯೋಪತಿ ಪದ್ಧತಿಯಲ್ಲಿ ಎಂ.ಎಸ್./ಎಂ.ಡಿ. ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು, ಸ್ನಾತಕೋತ್ತರ ಪದವೀಧರರು ಲಭ್ಯವಿಲ್ಲದಿದ್ದರೆ ಕನಿಷ್ಠ 3 ವರ್ಷಗಳ ಅನುಭವದೊಂದಿಗೆ ಪಿ.ಜಿ. ಅಲೋಯನ್ಸ್ ರಹಿತವಾಗಿ ಬಿಹೆಚ್‌ಎಂಎಸ್ ಪದವಿಯನ್ನು ಪರಿಗಣಿಸಲಾಗುವುದು. | ಕನಿಷ್ಟ-18 ಗರಿಷ್ಟ 40 ವರ್ಷ |
| 03 | ಮಲ್ಟಿ ಪರ್ಪಸ್ ವರ್ಕರ್ | ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆ, ದಾವಣಗೆರೆ. | 01 | ಪರಿಶಿಷ್ಟ ಜಾತಿ, ಪ್ರ-ಎ/ ಇತರೆ (Caste Code: 22, 28, 32, 40, 42, 48, 50, 51, 56, 61, 72, 76, 88, 89, 93, 94) | ರೂ. 16,900/- | ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಸರ್ಕಾರಿ/ಖಾಸಗಿ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಠ 01 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು ಮತ್ತು ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿರುತ್ತದೆ. | ಕನಿಷ್ಟ-18 ಗರಿಷ್ಟ 40 ವರ್ಷ |
| 04 | | ತಾಲ್ಲೂಕು ಸರ್ಕಾರಿ ಆಯುರ್ವೇದ ಆಸ್ಪತ್ರೆ, ಚನ್ನಗಿರಿ | 01 | ಸಾಮಾನ್ಯ ಅಭ್ಯರ್ಥಿ/ ಇತರೆ | | | ಕನಿಷ್ಟ-18 ಗರಿಷ್ಟ 35 ವರ್ಷ |

ಪು.ತಿ.ನೋ.

ಮೇಲ್ಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಈ ಕಛೇರಿಯಿಂದ ಉಚಿತವಾಗಿ ನೀಡಲಾಗುವುದು. ಅಭ್ಯರ್ಥಿ ಈ ಅಧಿಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ ಈ ಕಛೇರಿಯಿಂದ ಅರ್ಜಿಯನ್ನು ಪಡೆದು ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ: 05-02-2026ರಂದು ಸಂಜೆ 5:30ರೊಳಗೆ ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, 50 ಹಾಸಿಗೆಗಳ ಸಂಯುಕ್ತ ಆಯುಷ್ ಆಸ್ಪತ್ರೆಯ ಆವರಣ, ನಾಗಮ್ಮ ಕೇಶವಮೂರ್ತಿ ಬಡಾವಣೆ, (ಜೆ.ಹೆಚ್. ಪಟೇಲ್ ಬಡಾವಣೆಯ ಪೋದಾರ್ ಸ್ಕೂಲ್ ಹತ್ತಿರ), ದಾವಣಗೆರೆ-577004. ಈ ವಿಳಾಸಕ್ಕೆ ಮುದ್ದಾಂ ಅಥವಾ ಸ್ಪೀಡ್‌ಪೋಸ್ಟ್ ಮುಖಾಂತರ ಸಲ್ಲಿಸುವುದು.

**ವಿಶೇಷ ಸೂಚನೆ**

ಈ ಹಿಂದೆ ದಿನಾಂಕ: 25-11-2025ರಂದು ಹೊರಡಿಸಲಾದ ನೇಮಕಾತಿ ಅಧಿಸೂಚನೆ ಪ್ರಕಟಣೆಯನ್ವಯ ಈ ಹಿಂದೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಪುನಃ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ.

ಸದಸ್ಯ ಕಾರ್ಯದರ್ಶಿಗಳು/
ಜಿಲ್ಲಾ ಆಯುಷ್ ಅಧಿಕಾರಿಗಳು,
ಜಿಲ್ಲಾಮಟ್ಟದ ಆಯುಷ್ ನೇಮಕಾತಿ ಸಮಿತಿ, ದಾವಣಗೆರೆ.

**ಪ್ರತಿಯನ್ನು ಗೌರವ ಪೂರ್ವಕವಾಗಿ ಮಾಹಿತಿಗಾಗಿ:**

1) ಮಾನ್ಯ ಆಯುಕ್ತರು, ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು.
2) ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ.
3) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ.
4) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಜಿಲ್ಲಾ ಆ.ಕು.ಕ ಇಲಾಖೆ, ದಾವಣಗೆರೆ.
5) ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ದಾವಣಗೆರೆ.
6) ಕ.ಪ್ರ/ಹೆ.ಪ್ರ.

## ಈ ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

- **ವಯೋಮಿತಿ:**

1. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಸಾಮಾನ್ಯ ಅಭ್ಯರ್ಥಿಗಳಿಗೆ ಕನಿಷ್ಠ 18 ವರ್ಷ ಹಾಗೂ ಗರಿಷ್ಠ 35 ವರ್ಷ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಕನಿಷ್ಠ 18 ವರ್ಷ, ಗರಿಷ್ಠ 40 ಮೀರಿರಬಾರದು.
2. ಈ ಹುದ್ದೆಗಳು ಸಂಪೂರ್ಣ ತಾತ್ಕಾಲಿಕ ಹುದ್ದೆಗಳಾಗಿದ್ದು, ಆಯುಷ್ ನಿರ್ದೇಶನಾಲಯವು ನ್ಯಾಮ್ ಯೋಜನೆಯಡಿ ಗುತ್ತಿಗೆ ಆಧಾರದ ನೇಮಕಾತಿಗಾಗಿ ವಿಧಿಸಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
3. ಗುತ್ತಿಗೆ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾಗಿದ್ದು, ದಿನಾಂಕ: 31-03-2026ಕ್ಕೆ ಅಂತ್ಯಗೊಳ್ಳುತ್ತದೆ. ಆರ್ಥಿಕ ವರ್ಷದ ಕೊನೆಯ ದಿನ ಮುಕ್ತಾಯವಾದ ನಂತರ ಒಂದು ದಿನ ವಿರಾಮ ನೀಡಿ (Break) ತರುವಾಯ ಮುಂದಿನ ಆರ್ಥಿಕ ವರ್ಷದ ಕೊನೆಯ ದಿನಾಂಕದವರೆಗೆ ಗುತ್ತಿಗೆ ಸೇವೆಯನ್ನು ಮುಂದುವರೆಸುವ ಬಗ್ಗೆ ಆಯುಷ್ ನಿರ್ದೇಶನಾಲಯ ಮತ್ತು ಜಿಲ್ಲಾ ಆಯುಷ್ ಸಮಿತಿಯು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾಗುವುದು.
4. ಸದರಿ ಹುದ್ದೆಗಳನ್ನು ಜಿಲ್ಲಾ ಮಟ್ಟದ ಆಯುಷ್ ಸಮಿತಿಯು ಮೆರಿಟ್, ಅನುಭವ ಮತ್ತು ಸಂದರ್ಶನದ (ಕ್ರಮವಾಗಿ 70%, 20% ಮತ್ತು 10% ಆಧಾರದ) ಮೂಲಕ ನೇಮಕಾತಿ ಮಾಡಲಾಗುವುದು.
5. ಯಾವುದೇ ಸಂದರ್ಭದಲ್ಲಿಯೂ ಸದರಿ ಹುದ್ದೆಯನ್ನು ಖಾಯಂ ಎಂದು ಪರಿಗಣಿಸಲಾಗುವುದಿಲ್ಲ.
6. ಗುತ್ತಿಗೆ ನೌಕರರಿಗೆ ಸಿಗುವ ರಜಾ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.
7. ಈ ಸೇವೆಯು ತಾತ್ಕಾಲಿಕವಾಗಿದ್ದು, ಯಾವುದೇ ಸಂದರ್ಭದಲ್ಲಾದರೂ ಈ ನೇಮಕಾತಿಯನ್ನು ಮುಂದುವರೆಸುವ ಅಥವಾ ರದ್ದುಪಡಿಸುವ ಹಕ್ಕನ್ನು ಜಿಲ್ಲಾ ಆಯುಷ್ ಸಮಿತಿಯು ಹೊಂದಿರುತ್ತದೆ.
8. ಈ ನೇಮಕಾತಿ ಅಧಿಸೂಚನೆಯಲ್ಲಿ ನೀಡಿದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುವುದು.
9. ಜಿಲ್ಲಾ ಆಯುಷ್ ಅಧಿಕಾರಿಗಳು ಮತ್ತು ನೇಮಕಗೊಂಡ ಆಸ್ಪತ್ರೆಗಳ ವೈದ್ಯಾಧಿಕಾರಿಗಳು ವಹಿಸುವ ಸಂಬಂಧಪಟ್ಟ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸತಕ್ಕದ್ದು. ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗುವುದು ಅಥವಾ ವೈದ್ಯಾಧಿಕಾರಿಗಳಿಂದ ಹಾಗೂ ಸಾರ್ವಜನಿಕರಿಂದ ಅಸಮರ್ಪಕ ಕರ್ತವ್ಯ ನಿರ್ವಹಣೆ ಬಗ್ಗೆ ಏನಾದರೂ ದೂರುಗಳು ಬಂದಲ್ಲಿ ಗುತ್ತಿಗೆ ಹುದ್ದೆಯಿಂದ ವಜಾ ಮಾಡಲಾಗುವುದು.
10. ಗುತ್ತಿಗೆ ಸಿಬ್ಬಂದಿಯ ಕರ್ತವ್ಯ ನಿರ್ವಹಣೆ ಕುರಿತು ಪ್ರತಿ ವರ್ಷದ ಅಂತ್ಯದಲ್ಲಿ ಸಂಬಂಧಿಸಿದ ಆಸ್ಪತ್ರೆಗಳ ಆಡಳಿತ ವೈದ್ಯಾಧಿಕಾರಿಗಳಿಂದ Performance Appraisal ಪಡೆದು ಕರ್ತವ್ಯ ನಿರ್ವಹಣೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಮುಂದಿನ ವರ್ಷಕ್ಕೆ ಮುಂದುವರೆಸಲಾಗುವುದು. ಇಲ್ಲದಿದ್ದಲ್ಲಿ ಜಿಲ್ಲಾ ಆಯುಷ್ ನೇಮಕಾತಿ ಸಮಿತಿಯ ಅನುಮೋದನೆ ಪಡೆದು ವಜಾಗೊಳಿಸಲಾಗುವುದು.
11. ಗುತ್ತಿಗೆ ಸಿಬ್ಬಂದಿಯು ಕೇಂದ್ರಸ್ಥಾನದಲ್ಲಿ ತಂಗಿದ್ದು, 24 ಗಂಟೆಗಳಲ್ಲೂ ಯಾವುದೇ ತುರ್ತುಸೇವೆಗೆ ಲಭ್ಯವಿದ್ದು, ಸೇವೆ ಸಲ್ಲಿಸುವ ಷರತ್ತಿಗೆ ಒಳಪಟ್ಟಿರತಕ್ಕದ್ದು.
12. ತೃಪ್ತಿಕರವಾದ ಕರ್ತವ್ಯ ನಿರ್ವಹಣೆ ಷರತ್ತಿಗೆ ಒಳಪಟ್ಟು ಪ್ರತಿ ತಿಂಗಳು ಕಾಲಕಾಲಕ್ಕೆ ಮಾನ್ಯ ಆಯುಕ್ತರು, ಆಯುಷ್ ಇಲಾಖೆ, ಬೆಂಗಳೂರು ರವರು ನಿಗದಿಪಡಿಸಿರುವ ಸಂಚಿತ ಮೊತ್ತವನ್ನು ಮಾತ್ರ ನೀಡಲಾಗುವುದು. ಯಾವುದೇ ಹೆಚ್ಚುವರಿಯಾಗಿ ವೇತನ ಮತ್ತು ಭತ್ಯೆಗೆ ಅರ್ಹರಿರುವುದಿಲ್ಲ.
13. ಈ ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯನ್ನು ಯಾವುದೇ ಸಮಯದಲ್ಲಿ ಕಾರಣವಿಲ್ಲದೇ ಸರ್ಕಾರ ಅಥವಾ ಉಭಯ ಪಕ್ಷಗಳು ಒಂದು ತಿಂಗಳ ನೋಟೀಸ್ ಕೊಟ್ಟು ಸೇವೆಯನ್ನು ಕೈಬಿಡುವ ಷರತ್ತಿಗೊಳಪಟ್ಟಿರುತ್ತದೆ.
14. ದುರ್ನಡತೆಯಿಂದಾಗಿ ಸರ್ಕಾರಕ್ಕೆ ನಷ್ಟವುಂಟಾದಲ್ಲಿ ಗುತ್ತಿಗೆ ಸಿಬ್ಬಂದಿಯು ಅದನ್ನು ಸರ್ಕಾರಕ್ಕೆ ತುಂಬಿಕೊಡತಕ್ಕದ್ದು.
15. ಗುತ್ತಿಗೆ ಸಿಬ್ಬಂದಿಯು ಖಾಯಂ ನೇಮಕಾತಿಗಾಗಲೀ, ವಿಶ್ರಾಂತಿ ವೇತನಕ್ಕಾಗಲೀ, ನಿವೃತ್ತಿ ಉಪದಾನಕ್ಕಾಗಲೀ, ವೇತನ ಶ್ರೇಣಿಗಾಗಲೀ ಅಥವಾ ಯಾವುದೇ ಭತ್ಯೆಗಳನ್ನು ಹಾಗೂ ಸಂಭಾವನೆಗಳನ್ನು ಪಡೆಯುವ ಹಕ್ಕನ್ನು ಹೊಂದಿರುವುದಿಲ್ಲ ಅಥವಾ ಈ ಕುರಿತು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ ಅಥವಾ ದಾವೆ ಹೂಡುವಂತಿಲ್ಲ.
16. ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯು ನಿರ್ದಿಷ್ಟ ಆಸ್ಪತ್ರೆಗೆ ಆಗಿರುವುದರಿಂದ ಯಾವುದೇ ಬೇರೆ ಆಸ್ಪತ್ರೆಗಾಗಲೀ/ಚಿಕಿತ್ಸಾಲಯಕ್ಕಾಗಲೀ ಅಥವಾ ಜಾಗಕ್ಕಾಗಲೀ ವರ್ಗಾವಣೆ ಅಥವಾ ಪ್ರತಿನಿಯೋಜನೆ ಪಡೆಯಲು ಅವಕಾಶವಿರುವುದಿಲ್ಲ.
17. ನೇಮಕಾತಿ ಹೊಂದಿದ ಮಾತ್ರಕ್ಕೆ ಗುತ್ತಿಗೆ ಹುದ್ದೆಯ ಮೇಲೆ ಸಂಪೂರ್ಣ ಹಕ್ಕು ಹೊಂದಿರುವುದಿಲ್ಲ.
18. ಕಾಲಕಾಲಕ್ಕೆ ಸರ್ಕಾರದಿಂದ ಹಾಗೂ ಆಯುಷ್ ಇಲಾಖೆಯಿಂದ ಹೊರಡಿಸಲಾಗುವ ಗುತ್ತಿಗೆ ನೌಕರರಿಗೆ ಸಂಬಂಧಿಸಿದ ಸುತ್ತೋಲೆಗಳ ಮತ್ತು ಆದೇಶಗಳ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.
19. ನೇಮಕಾತಿ ಹೊಂದಿದ ಸಿಬ್ಬಂದಿಗೆ ಇಲಾಖೆಯಿಂದ ಬಿಡುಗಡೆಯಾಗುವ ಅನುದಾನದ ಲಭ್ಯತೆ ಮೇರೆಗೆ ಪ್ರತಿ ತಿಂಗಳು ಸಂಚಿತ ವೇತನ ಪಾವತಿಸಲಾಗುವುದು.

ಪು.ತಿ.ನೋ.

20. ಜಾತಿ ಮತ್ತು ಆದಾಯ ಆಧಾರಿತ ಮೀಸಲಾತಿ ಕೋರುವ ಅಭ್ಯರ್ಥಿಯು ಸಂಬಂಧಿಸಿದ ಪ್ರಾಧಿಕಾರ/ಅಧಿಕಾರಿಯವರಿಂದ ಪ್ರಮಾಣಪತ್ರ ಪಡೆದು ಸಲ್ಲಿಸುವುದು. ಮತ್ತು ಸದರಿ ಪ್ರಮಾಣಪತ್ರವು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೆ ಚಾಲ್ತಿಯಲ್ಲಿರುವಂತೆ ಸಂಬಂಧಿಸಿದ ತಹಶೀಲ್ದಾರರಿಂದ ಪಡೆದಿರಬೇಕು. (ಪರಿಶಿಷ್ಟ ಜಾತಿ ಸಮುದಾಯದವರು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೆಹಿಮ 2025, ಬೆಂಗಳೂರು, ದಿನಾಂಕ: 03-09-2025ರ ಅದೇಶದಂತೆ ಪ್ರವರ್ಗ-ಎ ರಡಿ ಜಾತಿ ಮತ್ತು ಆದಾಯ ಪ್ರಮಾಣಪತ್ರ ಪಡೆದು ಸಲ್ಲಿಸತಕ್ಕದ್ದು).
21. ವಯೋಮಿತಿ ಸಡಿಲಿಕೆಗೆ ಸಂಬಂಧಿಸಿದಂತೆ ವಿನಾಯಿತಿ ಕೋರುವ ಅಭ್ಯರ್ಥಿಯು ಸಂಬಂಧಿಸಿದ ಪ್ರಾಧಿಕಾರ/ಅಧಿಕಾರಿಯವರಿಂದ ಪ್ರಮಾಣಪತ್ರ ಪಡೆದು ಸಲ್ಲಿಸುವುದು.
22. ಈ ನೇಮಕಾತಿ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ಜಿಲ್ಲಾ ಆಯುಷ್ ನೇಮಕಾತಿ ಸಮಿತಿಯು ಹೊಂದಿರುತ್ತದೆ.

05/01/26

ಸದಸ್ಯ ಕಾರ್ಯದರ್ಶಿಗಳು/
ಜಿಲ್ಲಾ ಆಯುಷ್ ಅಧಿಕಾರಿಗಳು,
ಜಿಲ್ಲಾಮಟ್ಟದ ಆಯುಷ್ ನೇಮಕಾತಿ ಸಮಿತಿ, ದಾವಣಗೆರೆ.